ಅ.ದಾ.149/2021 ಪಿಡಬ್ಲ್ಯೂ-2

ದಿನಾಂಕಃ 18.06.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಯು.ಎಲ್.ಎಸ್. ವಕೀಲರಿಂದ:**

ಈ ದಾವೆಯನ್ನು ದಾವಾ ಜಮೀನಿನ ಮಾಲೀಕತ್ವ ಹಾಗೂ ಪ್ರತಿಬಂಧಕಾಜ್ಞೆ ಕೋರಿ ಸಲ್ಲಿಸಿದ್ದೇನೆ. ವಾದಪತ್ರ ತಯಾರಿಸಲು ನಾನು ಮತ್ತು ನನ್ನ ಅಣ್ಣ ವಾದಿ ಮಾಹಿತಿ ನೀಡಿದ್ದೇವೆ. ವಾದಪತ್ರದಲ್ಲಿ ಏನು ಬರೆದಿದೆ ಎಂದು ನಾನು ಓದಿದ್ದೇನೆ. ನಾನು ಬಿ.ಎ., ಪದವೀಧರ. ಈ ದಾವೆಯನ್ನು ಕನ್ನಾಪುರ ಗ್ರಾಮದ ಸ.ನಂ.14/5 ರ 36 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದೆ. ದಾವಾ ಜಮೀನನ್ನು ದಿ.26.08.2013 ರ ಕ್ರಯಪತ್ರ ಸಂ.668/2013-14 ರಂತೆ ವಾದಿಯು ಎಂ.ಎಸ್.ಅನ್ನಪೂರ್ಣ ಮತ್ತು ಅವರ ಕುಟುಂಬಸ್ಥರಿಂದ ಖರೀದಿಸಿದ್ದಾರೆ. ಪ್ರತಿವಾದಿಯೂ ಸಹಾ ಕನ್ನಾಪುರದ ವಾಸಿ ಎಂದರೆ ಸರಿ. ಕನ್ನಾಪುರ ಗ್ರಾಮದ ಸ.ನಂ.14/5 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸ.ನಂ.14/5 ರಲ್ಲಿ ಪ್ರತಿವಾದಿಯ ತಂದೆಗೆ ಇನಾಂ ಮೂಲಕ ಜಮೀನು ಮಂಜೂರಾಗಿದೆ ಎಂದರೆ ಸರಿಯಲ್ಲ.

ಪ್ರತಿವಾದಿಯ ತಂದೆಗೆ ಮಂಜೂರಾದ ಜಮೀನಿನಲ್ಲಿ ಇಂದಿಗೂ ಸಹಾ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮಂಜೂರಾದ ಜಮೀನಿನ ಮೇಲೆ ನಮಗೆ ಯಾವುದೇ ಹಿತಾಸಕ್ತಿ ಮತ್ತು ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ನಾನು ಮತ್ತು ನನ್ನ ಅಣ್ಣ ಮಾಹಿತಿ ಕೊಟ್ಟಿದ್ದೇವೆ. ಪ್ರತಿವಾದಿಪತ್ರವನ್ನು ನಾನು ಓದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.